ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.
ಸಿಸಿ ನಂಬರ್ **389/2021**

| | | | |
|---|---|---|---|
| ಸಾಕ್ಷಿಯ ಹೆಸರು | : ಹೆಚ್.ಎಸ್ ಸುರೇಶ್ | | ಸಿ.ಡಬ್ಲ್ಯು 22 |
| ತಂದೆಯ ಹೆಸರು | : ಶಂಕರಯ್ಯ ಡಿ | | ಪಿ.ಡಬ್ಲ್ಯು 10 |
| ವಯಸ್ಸು | : 53 ವರ್ಷ | | |
| ಉದ್ಯೋಗ | : ಡಿ.ವಯ್.ಎಸ್.ಪಿ ಲೋಕಾಯುಕ್ತ | | |
| ವಾಸ ಸ್ಥಳ | ಹಾಸನ | | |

ದಿನಾಂಕಃ**27-02-2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು ದಿಃ 17-09-2019 ರಿಂದ 05-06-2021 ನೇ ಸಾಲಿನಲ್ಲಿ ತರೀಕೆರೆಯಲ್ಲಿ ಪಿ.ಐ ಎಂದು ಕೆಲಸ ಮಾಡಿದ್ದೇನೆ.

ಈ ಪ್ರಕರಣದಲ್ಲಿ ದಿನಾಂಕ 09.05.2020 ರಂದು ಈ ಪ್ರಕರಣದ ಕಡತವನ್ನು ಚಾಸ-21 ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿದ್ದೇನೆ. ಅದೇ ದಿನ ಗುನ್ಹಾ ಸ್ಥಳ ಭೇಟಿ ಕೊಟ್ಟು ಚಾಸ-9 ಮತ್ತು 10 ರವರ ಸಮಕ್ಷಮ ಚಾಸ-1 ರವರು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ಸಂಜೆ 4.15 ರಿಂದ 5.15 ಮಧ್ಯದಲ್ಲಿ ಜರುಗಿಸಿದ್ದೇನೆ. ಆ ಸಮಯಕ್ಕೆ ಕಚ್ಚಾ ನಕ್ಷೆ ಬಿಡಿಸಿ ಭಾವಚಿತ್ರವನ್ನು ಕೂಡ ತೆಗೆಸಿದ್ದೇನೆ. ಅದೇ ದಿನ ಅದೇ ಪಂಚರ ಸಮಕ್ಷಮದಲ್ಲಿ ಸಂಜೆ 5.45 ರಿಂದ 6.30 ರ ಮಧ್ಯದಲ್ಲಿ ಅಪಘಾತದ ಪಡಿಸಿದ ವಾಹನ ನಂ.ಕೆ.ಎ.18-ಇ.ಎ 6008 ಬೈಕ್ ಅನ್ನು ನನ್ನ ಸುಪರ್ದಿಗೆ ಪಡೆದುಕೊಂಡಿದ್ದೇನೆ. ಅದೇ ದಿನ ಚಾಸ- 11 ರವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ದಿನಾಂಕ 11.05.2020 ರಂದು 1 ನೇ ಆರೋಪಿ ನನ್ನ ಮುಂದೆ ಹಾಜರಾದ ಪ್ರಯುಕ್ತ ದಸ್ತಗಿರಿ ನಿಯಮಗಳನ್ನು ಅನುಸರಿಸಿ ಆತನನ್ನು ಠಾಣಾ ಜಾಮೀನಿನ ಮೇಲೆ ಕಳುಹಿಸಿಕೊಟ್ಟಿದ್ದೇನೆ. ಅದೇ ದಿನ ಅಪಘಾತ ಪಡಿಸಿದ ವಾಹನವನ್ನು ಐ.ಎಂ.ವಿ ತಪಾಸಣೆ ಮಾಡಿಸಿದ ನಂತರ ಸೂಕ್ತ ದಾಖಲಾತಿಗಳನ್ನುಪಡೆದುಕೊಂಡು ಮಾಲೀಕರ ಮಧ್ಯಂತರ ವಶಕ್ಕೆ ಬಿಟ್ಟು ಕೊಟ್ಟಿದ್ದೇನೆ. ದಿನಾಂಕ 16.02.2020 ರಂದು ಅಪಘಾತದಲ್ಲಿ ಮೃತಪಟ್ಟ ಅಂಡಾಳಮ್ಮರವರ ಪಿ.ಎಂ. ವರದಿಯನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿದ್ದೇನೆ. ದಿನಾಂಕ 09.05.2020 ರಂದು ರಂಗನಾಥ ಮತ್ತು ಅಣ್ಣಪ್ಪರವರ ಹೇಳಿಕೆ ಮತ್ತು ದಿನಾಂಕ 11.05.2020 ರಂದು ಮಂಜುನಾಥ ರವರ ಹೇಳಿಕೆ ಮತ್ತು ದಿನಾಂಕ 09.05.2020 ರಂದೆ ಹರೀಶ್ ರವರ ಹೇಳಿಕೆಗಳನ್ನು ಕೂಡ ದಾಖಲಿಸಿಕೊಂಡಿದ್ದೇನೆ. ದಿನಾಂಕ 20.07.2020 ರಂದು ಅಪಘಾತ ಪಡಿಸಿದ ವಾಹನದ ಐ.ಎಂ. ವಿ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿದ್ದೇನೆ. ದಿನಾಂಕ 10.09.2020 ರಂದು ಅಪಘಾತದಲ್ಲಿ ಗಾಯಗೊಂಡ ಅಂಕಿತಾ ಈಕೆಯ

ಗಾಯದ ಪ್ರಮಾಣ ಪತ್ರವನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಿಂದ ಪಡೆದುಕೊಂಡಿದ್ದೇನೆ. ದಿನಾಂಕ 28.01.2021 ರಂದು ತನಿಖೆಯನ್ನು ಪೂರ್ಣಗೊಳಿಸಿ ಸೂಕ್ತ ಸಾಕ್ಷಾದಾರಗಳು ಇದ್ದ ಕಾರಣ ಆರೋಪಿಗಳ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ. ಸ್ಥಳ ಮಹಜರ್ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು, ಜಪ್ತಿ ಪಂಚನಾಮೆಯ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-5(ಸಿ) ಎಂದು, ಐ.ಎಂ.ವಿ ವರದಿಯ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು, ಗಾಯದ ಪ್ರಮಾಣ ಪತ್ರವನ್ನು ನಿಪಿ-10 ಎಂದು, ಪಿ.ಎಂ. ವರದಿಯನ್ನು ನಿಪಿ-11 ಎಂದು, ಭದ್ರತಾ ಪತ್ರವನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ನಿಪಿ-3 ಮತ್ತು 4 ಭಾವಚಿತ್ರದಲ್ಲಿ ನಾನು ಕಾಣಿಸುತ್ತಿದ್ದೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ನಾವು ಗುನ್ನಾ ಸ್ಥಳಕ್ಕೆ ಸಂಜೆ 4 ಗಂಟೆಯ ಸುಮಾರಿಗೆ ಹೋಗಿದ್ದೇವೆ. ಕಚ್ಚಾ ನಕ್ಷೆಯ ಪ್ರಕಾರ ಅಪಘಾತದ ಸ್ಥಳ ರಸ್ತೆಯ ಮಧ್ಯದಲ್ಲಿ ತೋರಿಸಲಾಗಿದೆ ಎಂದರೆ ಸರಿಯಲ್ಲ. ಅಪಘಾತದ ಸಮಯಲ್ಲಿ ಅಂಡಾಳಮ್ಮ ರವರು ದೇವರ ದರ್ಶನ ಪಡೆದುಕೊಂಡು ರಸ್ತೆ ದಾಟುತ್ತಿದ್ದರು ಎಂದರೆ ಸರಿಯಲ್ಲ, ರಸ್ತೆಯ ಎಡಭಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಸಾಮಾನ್ಯವಾಗಿ ಮಗುವನ್ನು ಹೆಣ್ಣು ಮಕ್ಕಳು ಬಲ ಭಾಗದಲ್ಲಿ ಎತ್ತಿಕೊಂಡು ಹೋಗುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಗುವನ್ನು ಎತ್ತಿಕೊಂಡ ಕಾರಣ ಪಕ್ಕದಲ್ಲಿ ನಡೆಯುವ ಘಟನೆಗಳು ಅಂಡಾಳಮ್ಮ ಇವರಿಗೆ ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ವಾಹನ ಸಂಚಾರವನ್ನು ಗಮನಿಸದೇ ಏಕಾಏಕಿ ರಸ್ತೆಯ ಮಧ್ಯದಲ್ಲಿ ಬಂದ ಕಾರಣ ಅಪಘಾತ ಆಗಿದೆ ಎಂದರೆ ಸರಿಯಲ್ಲ. 1 ನೇ ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ, ಸ್ಥಳ ತನಿಖೆ ಮಾಡಿಲ್ಲ, ಜಪ್ತಿ ಪಂಚನಾಮೆಯನ್ನು ಕೂಡ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಂದೆ ಸಾಕ್ಷಿದಾರರು ಯಾವುದೇ ಹೇಳಿಕೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-10 ರಿಂದ 12 ಗಳನ್ನು ಈ ಪ್ರಕಣಕ್ಕೆ ಅನುಕೂಲ ಆಗುವ ರೀತಿ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯ ತಪ್ಪು ಇಲ್ಲವೆಂದು ಗೊತ್ತಿದ್ದರೂ ಕೂಡ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ